ಆಯುಷ್ಯಹೋಮ, ಚೌಲ, ಹೋಳಿಗೆಯ ಊಟ ಎಲ್ಲಾ ಜೋರಾಗಿಯೇ ನಡೆದವು. ಹೊಟ್ಟೆ ಭಾರವಾಗಿ, ಎಲೆ – ಅಡಿಕೆ ಹಾಕಿಕೊಂಡು, ಮಧ್ಯಾಹ್ನದ ನಿದ್ದೆ ಮಾಡಿ ಎದ್ದರೂ ಮಂಕು ಹರಿದಿರಲಿಲ್ಲ. ಸಂಜೆ ಅಣ್ಣ – ತಮ್ಮಂದಿರು ಯಾರದೋ ಪರಿಚಯಸ್ಥರ ಮನೆಗೆ ಹೋದರು. ಮಾಲತಿ, ಸುಮತಿ, ಅನಿಲನೊಂದಿಗೆ ಕೊಂಚ ದೂರ ಅಡ್ಡಾಡಲು ಹೊರಟರು. ಗಾಳಿಯಲ್ಲಿ ತೇಲಿಬರುತ್ತಿದ್ದ ರಂಜಕದ ಹೂವಿನ ನವಿರಾದ ವಾಸನೆ ಸುಮತಿಗೆ ಸ್ವಲ್ಪಮಟ್ಟಿಗೆ ಚೇತನವನ್ನು ನೀಡಿತು. ಮರದ ಕೆಳಗೆ ಅಂದವಾದ ಪುಟ್ಟ ಪುಟ್ಟದಾದ ರಂಜಕದ ಹೂವುಗಳು ಚೆಲ್ಲಾಪಿಲ್ಲಿಯಾಗಿ ಸುರಿದಿದ್ದವು. ಮಾಲತಿ – ಸುಮತಿ ಮರದ ಕೆಳಗೆ ಕುಳಿತರು. ಅನಿಲ ಅಲ್ಲಿಂದಿಲ್ಲಿ ಓಡಾಡುತ್ತಾ ಹೂವು ಆರಿಸಿ ತಾಯಿಯ ಮಡಿಲಲ್ಲಿ ತುಂಬುತ್ತಿದ್ದ. ಸ್ವಲ್ಪ ಹೊತ್ತು ಮೌನವಾಗಿ ಕುಳಿತ ಮಾಲತಿ.

'ಸುಮತಿ, ನಿನ್ನನ್ನು ಒಂದು ಮಾತು ಕೇಳ್ಲಾ?' ಎಂದು ಮೌನ ಮುರಿದಾಗ ಆಕೆಗೆ ಸ್ಪಷ್ಟವಾಗಿತ್ತು. ಮಾಲತಿ ಕೇಳುವುದೇನೆಂದು.

'ನೋಡು, ನಮ್ಮತ್ತೆ – ಮಾವ ನಿನ್ನ ಎರಡ್ನೇ ಸೊಸೆ ಮಾಡ್ಕೋಬೇಕು ಅಂತ ಇಷ್ಟಪಟ್ಟಿದ್ದಾರೆ. ಮಂಜೂಗೂ ಇಷ್ಟ ಇರೋ ಹಾಗೆ ಕಾಣುತ್ತೆ. ಅವರಿಗೆ ನಿನ್ನನ್ನ ತೋರಿಸ್ಬೇಕು, ನೀನೂ ಮಂಜೂನ್ನ ನೋಡಬೇಕೂ ಅಂತಾನೇ ನಿನಗೆ ನಾನು ಇಲ್ಲಿಗೆ ಬಾಂತ ಹೇಳಿದ್ದು. ನಿನಗೂ ಒಪ್ಪಿಗೆ ಆದರೆ ನಿಮ್ಮನೇಲಿ ಮುಂದಿನ ಮಾತು ಆಡೋಣ' ಎಂದಾಗ ಯಾಕೋ ಆಗಬೇಕಾದ ಸಂತೋಷ ಆಗಲಿಲ್ಲ. ರಾತ್ರಿ ನಿದ್ದೆ ಹೋದಾಗ ಕಳ್ಳತನದಿಂದ ಹತ್ತಿರ ಬಂದು ತನ್ನ ದೇಹದ ಬಯಕೆ ತೀರಿಸಿಕೊಳ್ಳಲು ಪ್ರಯತ್ನಿಸುವುದರ ಬದಲು ಇವತ್ತು ಅವನೇ ಇಲ್ಲಿಗೆ ಕರ್ಕೊಂಡು ಬಂದು ಇದೇ ರಂಜಕದ ಹೂವಿನ ಹಾಸಿಗೆ ಮೇಲೆ ಕೂಡಿಸಿ, ಮಾಲತಿಯ ಬದಲು ತಾನು ಎದುರಿಗೆ ಕುಳಿತು, 'ನಾನು ನಿನ್ನನ್ನು ತುಂಬಾ ಪ್ರೀತಿಸ್ತೇನೆ. ನನ್ನನ್ನ ಮದುವೆ ಆಗ್ತೀಯಾ?' ಎಂದು ಕೇಳಿದ್ದರೆ ಎಷ್ಟು ಚೆನ್ನಾಗಿರ್ತಿತ್ತು! ತಾನು ನಾಚಿಕೆಯಿಂದ ತಲೆತಗ್ಗಿಸಿ ಒಪ್ಪಿಗೆ ಸೂಚಿಸಿದಾಗ ಹಾಗೇ ಕೈಯಿಂದ ಗಲ್ಲವನ್ನು ಹಿಡಿದೆತ್ತಿ, ಕಣ್ಣಲ್ಲಿ ಕಣ್ಣಿಟ್ಟು ನೋಡಿ, ಮುಖ ಹತ್ತಿರ ತಂದು ತುಟಿಯ ಮೇಲೆ ಹೂಮುತ್ತನ್ನೊತ್ತಿದ್ದರೆ ತಾನು ಆಗ ಎಷ್ಟು ಸುಖಿ! ಆತುರದಿಂದ ಮಂಜುನಾಥ ಎಲ್ಲಾ ಹಾಳುಮಾಡಿದ್ದ. ಕನಸನ್ನೆಲ್ಲಾ ಚೂರು ಚೂರಾಗಿಸಿದ್ದ. ಪ್ರೀತಿಯ ಬದಲು ಕಾಮದಾಹದ ಪ್ರದರ್ಶನ ಮಾಡಿದ್ದ. ಏಕೋ ಅದನ್ನು ನೆನೆಸಿಕೊಂಡರೆ ಅಸಹ್ಯವಾಗುತ್ತಿತ್ತು. ಮಂಜುನಾಥನ ಬಗ್ಗೆ ಜುಗುಪ್ಸೆಯಾಗುತ್ತಿತ್ತು.

ಸುಮತಿ ಯೋಚನೆಯಲ್ಲಿ ಮೈಮರೆತಾಗ, ಮಾಲತಿಯೇ, 'ನಿಧಾನವಾಗಿ ಊರಿಗೆ ಹೋದ ಮೇಲೆ ಹೇಳು ಪರವಾಗಿಲ್ಲ. ಆತುರವೇನೂ ಇಲ್ಲ' ಎಂದಾಗ 'ನಿಮಗೆ ಆತುರವೇನೂ ಇಲ್ಲದಿದ್ದರೂ ಮಂಜುನಾಥನಿಗೆ ಆತುರವಿದೆಯಲ್ಲಾ' ಎಂದುಕೊಂಡರೂ ಸದ್ಯಕ್ಕೆ ಬಂದ ಕುತ್ತು ಪರಿಹಾರವಾಗಿತ್ತು. ತಾನು ಹೇಳುವ ಉತ್ತರ ನಿಶ್ಚಯವಾಗಿದ್ದರೂ ತಾನು ಆ ಮನೆಯ ಅತಿಥಿಯಾಗಿರುವಾಗ ಅದನ್ನು ಹೇಳುವುದು ಬೇಡವೆಂದು ಸುಮ್ಮನಾದಳು.

ಮನೆಯ ಹತ್ತಿರ ಬಂದಾಗ ಏನೋ ಗಲಾಟೆ ನಡೆದಿತ್ತು. ಆಳುಗಳು ಪೊದೆಯಲ್ಲಿ ಹೋಗಿ ಸೇರಿಕೊಂಡ ಹಾವನ್ನು ಹುಡುಕುತ್ತಿದ್ದರು. ಕೊನೆಗೆ 'ಅಯ್ಯೋ, ಕೆರೆ ಹಾವು ನಡೀರಿ' ಎಂದು ನಿರಾಶರಾಗಿ ಹೊರಟರು. 'ಕೆರೆ ಹಾವೋ, ನಾಗರ ಹಾವೋ. ಈ ಸುಂದರವಾದ ಪ್ರಕೃತಿಯ ಮಡಿಲಲ್ಲೂ ಹಾವಿನಂತಹ ವಿಷಜಂತುಗಳೂ ಇವೆ. ಸದ್ಯ ಈ ಊರಿನಿಂದ ಆದಷ್ಟು ಬೇಗನೆ, ನಾಳೇನೇ ಮೊದಲ ಬಸ್ಸಿಗೆ ಹೊರಟುಬಿಡಬೇಕು ಎಂದು ಸುಮತಿ ನಿರ್ಧರಿಸಿ ಮನೆಯೊಳಗೆ ಹೆಜ್ಜೆ ಹಾಕಿದಳು.